**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

# ಕರ್ನಾಟಕ ವಿಧಾನ ಪರಿಷತ್ತು

2ನೇ ಮಾರ್ಚ್ 2020
ಸೋಮವಾರ

## ವಿಷಯಾನುಕ್ರಮಣಿಕೆ

**1. ಸಂತಾಪ ಸೂಚನೆ.**

**ಮಾಜಿ ಸಚಿವರು ಹಾಗೂ ವಿಧಾನಸಭೆಯ ಸದಸ್ಯರಾಗಿದ್ದ ಸಿ.ಚನ್ನಿಗಪ್ಪ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಆರ್.ಎಸ್.ಭಾಗವತ್ ಹಾಗೂ ಕನ್ನಡ ಸಾರಸ್ವತ ಲೋಕದ ದಿಗ್ಗಜ ಖ್ಯಾತ ಇತಿಹಾಸ ತಜ್ಞ ಮತ್ತು ಸಾಹಿತಿ ಪ್ರೊ. ಷ.ಶೆಟ್ಟರ್ ಅವರುಗಳು ನಿಧನರಾಗಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು)
– ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು)

**2. ಕೆಳಮನೆಯ ಸದಸ್ಯರೊಬ್ಬರು ಸ್ವಾತಂತ್ರ್ಯ ಹೋರಾಟಗಾರ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆನ್ನಲಾದ ವಿಚಾರದ ಬಗ್ಗೆ ಪ್ರಸ್ತಾಪ.**

– ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು)
– ಡಾ॥ ವೈ.ಎ.ನಾರಾಯಣಸ್ವಾಮಿ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಆಯನೂರು ಮಂಜುನಾಥ್
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(110) 02/03/2020/11:10/ಎಸ್‌ಪಿಆರ್/ಎಕೆ**

**ಕರ್ನಾಟಕ ವಿಧಾನ ಪರಿಷತ್ತು**

***ಸೋಮವಾರ, 02ನೇ ಮಾರ್ಚ್ 2020***

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠವನ್ನು ಅಲಂಕರಿಸಿದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1. ಸಂತಾಪ ಸೂಚನೆ**

**ವಿಷಯ: ಮಾಜಿ ಸಚಿವರು ಹಾಗೂ ವಿಧಾನಸಭೆಯ ಸದಸ್ಯರಾಗಿದ್ದ ಸಿ.ಚನ್ನಿಗಪ್ಪ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಆರ್.ಎಸ್.ಭಾಗವತ್ ಹಾಗೂ ಕನ್ನಡ ಸಾರಸ್ವತ ಲೋಕದ ದಿಗ್ಗಜ ಖ್ಯಾತ ಇತಿಹಾಸ ತಜ್ಞ ಮತ್ತು ಸಾಹಿತಿ ಪ್ರೊ. ಷ.ಶೆಟ್ಟರ್ ಅವರುಗಳು ನಿಧನರಾಗಿರುವ ಬಗ್ಗೆ.**

.....

**ಸಭಾಪತಿಯವರು:- ಮಾಜಿ ಸಚಿವರು ಹಾಗೂ ವಿಧಾನಸಭೆಯ ಸದಸ್ಯರಾಗಿದ್ದ ಸಿ.ಚನ್ನಿಗಪ್ಪ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಆರ್.ಎಸ್.ಭಾಗವತ್ ಹಾಗೂ ಕನ್ನಡ ಸಾರಸ್ವತ ಲೋಕದ ದಿಗ್ಗಜ, ಖ್ಯಾತ ಇತಿಹಾಸ ತಜ್ಞ ಮತ್ತು ಸಾಹಿತಿ ಪ್ರೊ. ಷ.ಶೆಟ್ಟರ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.**

**(ಪಟ್ಟಿ ಲಗತ್ತಿಸಿದೆ)**

**(ಮುಂದು)**

(111)/2-3-2020/11-20/ಎಲ್ಎಂ/ಆರ್ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಅಗಲಿರುವ ಮೂರು ಜನ ಗಣ್ಯರ ಬಗ್ಗೆ ಸಂತಾಪ ಸೂಚನೆಯನ್ನು ತಾವು ಮಂಡಿಸಿದ್ದೀರಿ. ಅದರಲ್ಲಿ ಮೊದಲಿಗರಾದ, **ದಿ: ಸಿ.ಚನ್ನಿಗಪ್ಪನವರು;** ಇವರು 1994, 1999 ಮತ್ತು 2004ರ ಸಾರ್ವತ್ರಿಕ ಚುನಾವಣೆಯಲ್ಲಿ ಸತತವಾಗಿ ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾಗಿ, ಶ್ರೀ ಧರ್ಮಸಿಂಗ್ ಹಾಗೂ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರುಗಳ ಸಂಪುಟದಲ್ಲಿ ಅರಣ್ಯ, ಪರಿಸರ, ಅಬಕಾರಿ ಮತ್ತು ರೇಷ್ಮೆ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ಅವರಲ್ಲಿ ಇರುವ ವಿಶೇಷತೆ ಎಂದರೆ, ಯಾರೇ ಜನಸಾಮಾನ್ಯರು ಅವರ ಹತ್ತಿರ ಹೋಗಲಿ ಅತ್ಯಂತ ಪ್ರೀತಿಯಿಂದ, ಭಾವುಕತೆಯಿಂದ, ಗೌರವದಿಂದ ನೋಡಿಕೊಳ್ಳುತ್ತಿದರು. ಎಲ್ಲ ಪಾರ್ಟಿ ಸದಸ್ಯರನ್ನು ಸಮನಾಗಿ ಗೌರವಿಸುತ್ತಿದರು. ಅವರ ಹತ್ತಿರ ಯಾರೆ ಹೋಗಲಿ ಕರೆದು ಮಾತನಾಡಿಸಿ ತಮ್ಮ ಮಿತಿಯಲ್ಲಿಯೇ ಕೆಲಸವನ್ನು ಮಾಡಿಕೊಡುವಂತಹ ದೊಡ್ಡ ಗುಣ ಅವರಲ್ಲಿ ಇತ್ತು. ಇಂತಹ ಸಜ್ಜನ ರಾಜಕಾರಣಿಯನ್ನು ಇಂದು ನಮ್ಮ ರಾಜ್ಯ ಕಳೆದುಕೊಂಡಿದೆ.

**ಶ್ರೀ ಎಸ್.ಆರ್.ಭಾಗವತ್‌ರವರು** ಅತ್ಯಂತ ಹಿರಿಯ ನ್ಯಾಯವಾದಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಕುಮಟಾ ಪುರಸಭೆಯ ಸದಸ್ಯರಾಗಿ, ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ಇವರು ಸಹಕಾರಿ ಕ್ಷೇತ್ರದಲ್ಲಿಯೂ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. 1974ರಿಂದ 1980ರ ಅವಧಿಗೆ ಉತ್ತರ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸಿರುತ್ತಾರೆ. ಇವರು ಸಹಕಾರ ಕ್ಷೇತ್ರದಲ್ಲಿ, ಸಣ್ಣ ಪುರಸಭೆಯಿಂದ ರಾಜಕಾರಣ ಪ್ರಾರಂಭಿಸಿ ಮುಂದೆ ರಾಜಕಾರಣದಲ್ಲಿ ಅಪಾರ ಅನುಭವವನ್ನು ಹೊಂದಿ ಕೆಲಸ ಮಾಡಿದರು. ಇವರ ನಿಧನದಿಂದ ನಮ್ಮ ರಾಜ್ಯಕ್ಕೆ ಅಪಾರವಾದ ನಷ್ಟ ಉಂಟಾಗಿದೆ.

**ಪ್ರೊ.ಷ.ಶೆಟ್ಟರ್,** ಇವರು ಖ್ಯಾತ ಇತಿಹಾಸ ತಜ್ಞರು ಮತ್ತು ಕನ್ನಡ ಸಾರಸ್ವತ ಲೋಕಕ್ಕೆ ಬಹು ದೊಡ್ಡ ಶಕ್ತಿಯನ್ನು ಕೊಟ್ಟವರು. ಹಡಗಲಿ ತಾಲ್ಲೂಕಿನ ಹಂಪಸಾಗರದಲ್ಲಿ ಜನಿಸಿದ್ದ ಶ್ರೀಯುತರು ಸುಮಾರು 30ಕ್ಕೂ ಹೆಚ್ಚು ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕುವಲ್ಲಿ ಇವರ ಸಂಶೋಧನೆಗಳ ಕೊಡುಗೆ ಅನನ್ಯವಾದುದು. ಇಂದಿನ ದಿನ ಹಳೆಗನ್ನಡದ ಅನೇಕ ದಾಖಲೆಗಳು ಮರೆಯಾಗುತ್ತಿರುವಂತಹ ಸಂದರ್ಭದಲ್ಲಿ ಪ್ರೊ. ಷ.ಶೆಟ್ಟರ್‌ರವರ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೊಡುವಲ್ಲಿ ಸಹಾಯಕವಾಗಿರುವಂತಹ ಸಂದರ್ಭದಲ್ಲಿ ಹಳಗನ್ನಡದ 30ಕೂ ಹೆಚ್ಚು ಸಂಶೋಧನಾ ಗ್ರಂಥಗಳ ಕೊಡುಗೆ ಬಹು ದೊಡ್ಡದು. ಮಾನ್ಯರು ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಇತಿಹಾಸ ತಜ್ಞರಾಗಿ ಇವರು ಕೊಟ್ಟಿರುವ ಕೊಡುಗೆ ಬಹುದೊಡ್ಡದು. ಇಂತಹ ಹಿರಿಯ ಆತ್ಮಕ್ಕೆ ದೇವರು ಸದ್ಗತಿಯನ್ನು ಕೊಡಲಿ ಎಂದು ತಮ್ಮ ಮುಖಾಂತರ ದೇವರಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ.

ನಿಧನ ಹೊಂದಿದ. ಶ್ರೀ ಸಿ.ಚನ್ನಿಗಪ್ಪ, ಶ್ರೀ ಆರ್.ಎಸ್.ಭಾಗವತ್ ಮತ್ತು ಪ್ರೊ: ಷ.ಶೆಟ್ಟರ್‌ರವರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲೆಂದು ಬೇಡಿಕೊಂಡು, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಸಹಮತಿಯನ್ನು ಸೂಚಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ತಾವು ತಂದಿರುವ ಸಂತಾಪ ಸೂಚನಾ ಗೊತ್ತುವಳಿಯನ್ನು ಬೆಂಬಲಿಸುತ್ತಾ, ಶ್ರೀ ಸಿ.ಚನ್ನಿಗಪ್ಪ, ಶ್ರೀ ಆರ್.ಎಸ್.ಭಾಗವತ್ ಮತ್ತು ಪ್ರೊ: ಷ.ಶೆಟ್ಟರ್‌ರವರ ನಿಧನದ ನಿಮಿತ್ತವಾಗಿ ತಮ್ಮ ಮಾತುಗಳ ಜೊತೆಯಲ್ಲಿ ನನ್ನ ಮಾತುಗಳನ್ನು ಸೇರಿಸಲು ಇಚ್ಛಿಸುತ್ತೇನೆ.

ಶ್ರೀ ಚೆನ್ನಿಗಪ್ಪನವರು ಬಿ.ಎ., ಬಿ.ಎಡ್., ಎಲ್.ಎಲ್.ಬಿ., ಪದವೀಧರರಾಗಿದ್ದರೂ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಪೊಲೀಸ್ ಇಲಾಖೆಯ ಸೇವೆಯನ್ನು ಬಿಟ್ಟು ರಾಜಕೀಯಕ್ಕೆ ಬಂದವರು. ಈಗ ಸಭಾನಾಯಕರು ಹೇಳಿದ ಹಾಗೆ, ಶ್ರೀ ಚನ್ನಿಗಪ್ಪನವರು ಬಹಳ ಸ್ನೇಹಪರ ವ್ಯಕ್ತಿತ್ವವನ್ನು ಹೊಂದಿದವರು. ಎಲ್ಲರ ಜೊತೆ ಪ್ರೀತಿ-ವಿಶ್ವಾಸದಿಂದ ಬಾಳಿದವರು. ಪೊಲೀಸ್ ಇಲಾಖೆಯಲ್ಲಿದ್ದರೂ ಕೂಡ; ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವವರು ಸ್ನೇಹದಿಂದ ಇರುವುದಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವರು ಅಪವಾದ ಎನ್ನುವಷ್ಟರ ಮಟ್ಟಿಗೆ ಜನಸಾಮಾನ್ಯರ ಜೊತೆಯಲ್ಲಿ ಸ್ನೇಹದಿಂದ ಇದ್ದರು. ಇವರು ಸತತವಾಗಿ 1994, 1999 ಮತ್ತು 2004ರಲ್ಲಿ ವಿಧಾನಸಭೆಗೆ ಆಯ್ಕೆಯಾದವರು, ಶ್ರೀ ಧರ್ಮಸಿಂಗ್ ಹಾಗೂ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ಸಂಪುಟದಲ್ಲಿ ಅರಣ್ಯ, ಅಬಕಾರಿ ಮತ್ತು ರೇಷ್ಮೆ ಖಾತೆ ಸಚಿವರಾಗಿ ಕೆಲಸ ಮಾಡಿದ್ದಾರೆ. ಸಾರ್ವಜನಿಕ ಜೀವನದಲ್ಲಿ ತಮ್ಮ ಹೆಸರನ್ನು ಉಳಿಸಿ ಹೋಗುವಂತಹ ಕೆಲಸವನ್ನು ಮಾಡಿದ್ದಾರೆ. ಇವರ ನಿಧನದಿಂದ ಈ ರಾಜ್ಯ ಒಬ್ಬ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡ ಹಾಗೆ ಆಗಿದೆ.

ಶ್ರೀ ಆರ್.ಎಸ್.ಭಾಗವತ್‌ರವರು ವಿಧಾನ ಪರಿಷತ್ತಿನ ಮಾಜಿ ಸದಸ್ಯರು. ಉತ್ತರ ಕನ್ನಡ ಜಿಲ್ಲೆ ಕುಮಟದಲ್ಲಿ ಜನಿಸಿದ್ದ ಶ್ರೀಯುತರು ಕಾನೂನು ಪದವೀಧರರಾಗಿದ್ದು, ವೃತ್ತಿಯಲ್ಲಿ ನ್ಯಾಯವಾದಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇವರು ಯಶಸ್ವಿ ಉದ್ಯಮಿ ಕೂಡಾ ಆಗಿದ್ದರು. ಇವರು ಕುಮಟ ಪುರಸಭೆಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಇವರು ಸಹಕಾರಿ ಕ್ಷೇತ್ರದಲ್ಲೂ ಅಪಾರ ಸೇವೆಯನ್ನು ಸಲ್ಲಿಸಿದ್ದು, ಉತ್ತರ ಕನ್ನಡ ಜಿಲ್ಲೆಯ ಕೆಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ, ಅಧ್ಯಕ್ಷರಾಗಿ ದೀರ್ಘಕಾಲ ಸೇವೆಯನ್ನು ಸಲ್ಲಿಸಿದ್ದರು. 1974ರಿಂದ 1980ರ ಅವಧಿಗೆ ಉತ್ತರಕನ್ನಡ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರ ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿದ ಅನನ್ಯ ಸೇವೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ ಅವರಿಗೆ 'ಸಹಕಾರಿ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಸಹಕಾರಿ ಕ್ಷೇತ್ರವನ್ನು ಶ್ರೀಮಂತಗೊಳಿಸಿ, 'ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ' ಎನ್ನುವ ಸಹಕಾರಿ ಕ್ಷೇತ್ರದ ಮೂಲತತ್ವವನ್ನು ಅಕ್ಷರಶ: ಪಾಲನೆಗೆ ತಂದವರು. ಇವರು ಸಹಕಾರಿ ಕ್ಷೇತ್ರದ ಮಹಾನ್ ದಿಗ್ಗಜರು ಎಂದು ನಾನು ಹೇಳಬಯಸುತ್ತೇನೆ. ಇಂತಹ ಹಿರಿಯ ಸಹಕಾರಿಯನ್ನು ಕಳೆದುಕೊಂಡು ನಾಡಿನ ಸಹಕಾರಿ ಕ್ಷೇತ್ರವೇ ಬಡವಾಗಿದೆ ಎಂದು ಹೇಳಬಯಸುತ್ತೇನೆ.

ಪ್ರೊ. ಷ.ಶೆಟ್ಟರ್, ಇವರು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ ಮಹಾನ್ ದಿಗ್ಗಜರು ಮತ್ತು ಖ್ಯಾತ ಇತಿಹಾಸ ತಜ್ಞರು. ಇವರ ನಿಧನದಿಂದ ಬರಿ ನಾಡಿನ ಸಾಹಿತ್ಯ ಕ್ಷೇತ್ರಷ್ಟೇ ಅಲ್ಲದೆ ಇಡೀ ರಾಷ್ಟ್ರದ ಸಾಹಿತ್ಯ ಕ್ಷೇತ್ರ ಬರಡಾಗಿದೆ ಎಂದು ಹೇಳಬಯಸುತ್ತೇನೆ. ಕೆಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದಿದ್ದರು. ಇವರು ಹಳಗನ್ನಡ ಕಾವ್ಯ ಕುರಿತು ಸುಮಾರು 30ಕ್ಕೂ ಹೆಚ್ಚು ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿಸಿ ಕೊಡುವಲ್ಲಿ ಇವರ ಹಳಗನ್ನಡದ ಸಂಶೋಧನಾ ಗ್ರಂಥಗಳು ಬಹಳಷ್ಟು ಸಹಕಾರಿಯಾಗಿವೆ. ಇಂತಹ ಉತ್ಕೃಷ್ಟವಾದ ಮೌಲಿಕ ಗ್ರಂಥವನ್ನು ಬರೆದಂತಹ ಇವರ ಬಗ್ಗೆ ಇನ್ನೊಂದು ಮಾತು ಹೇಳಬೇಕಾದರೆ, ವಿಶ್ವದ ಅತ್ಯಂತ ದೊಡ್ಡದಾದಂತಹ ವಿಶ್ವವಿದ್ಯಾಲಯಗಳಲ್ಲಿ ಇವರು ಬೋಧಕರಾಗಿ ಕೆಲಸವನ್ನು ಮಾಡಿದ್ದಾರೆ. ವಿಶ್ವದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 200 ವಿಶ್ವವಿದ್ಯಾಲಯಗಳು, only two hundred universities are the best universities of the World. ದುರಂತ ಎಂದರೆ ವಿಶ್ವದ ಆ 200 ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲಿ ನಮ್ಮ ದೇಶದ ಒಂದು ವಿಶ್ವವಿದ್ಯಾಲಯವೂ ಇಲ್ಲ.

(ಮುಂದು)

112/02-03-2020/11-30/ಬಿಎಸ್‌ಡಿ-ಆರ್‌ಎನ್

**ಶ್ರೀ ಎಸ್.ಆರ್. ಪಾಟೀಲ್ (ಮುಂದು):**

ಇದೊಂದು ದುರಂತವಾಗಿದ್ದು, ಬಹುತೇಕ 200 ವಿಶ್ವವಿದ್ಯಾಲಯಗಳಲ್ಲಿ Indian Institute of Science ಸಮೀಪವೆಂಬಂತೆ ಇದ್ದು, ಇದೊಂದು ಚೆನ್ನಾಗಿದೆ. ವಿಶ್ವದ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ Cambridge and Harvard University Productive ಗಳು ಇದ್ದು, ಬಹಳ ಗೌರವ ಪಡೆದಿದೆ. ಅದೇ ರೀತಿ Athens, Heidelberg, Leiden, Moscow ಗಳಂತಹ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಅಷ್ಟೇ ಅಲ್ಲದೆ ದೆಹಲಿ Indian Council of Historical Research ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಶ್ವವಿದ್ಯಾಯಗಳ ಅಧ್ಯಯನ ಮತ್ತು ಸಂಶೋಧಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ನಮ್ಮ ಸದನದ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಅಂತ್ಯಕ್ರಿಯೆಯಲ್ಲಿ ಭಾಗಿಯಾದಾಗ ಒಂದು ಮಾತನ್ನು ಕೇಳಿದ ಬಗ್ಗೆ ಹೇಳಿದರು. ಅವರು ಸಾಯುವವರೆಗೂ ಗ್ರಂಥಗಳನ್ನು ಓದಿಕೊಳ್ಳುತ್ತಲೇ ಇದ್ದು, ಅವರು ಸತ್ತ ನಂತರ ಎರಡು ಶ್ರೇಷ್ಠ ಮತ್ತು ಮೌಲಿಕ ಗ್ರಂಥಗಳಾದ Pursuing death and Inviting Death ಗಳನ್ನು ಅವರ ಅಂತ್ಯ ಸಂಸ್ಕಾರದ ಜೊತೆಯಲ್ಲಿಯೇ ಇಡಬೇಕೆಂದು ಹೇಳಿದ್ದರಂತೆ. ಇವೆರಡು ಗ್ರಂಥಗಳು ಅವರ ಜೊತೆಯಲ್ಲಿಯೇ ಆಹುತಿ ಆಗಬೇಕೆಂದು ಇಚ್ಛೆ ಪಟ್ಟಿದ್ದರಂತೆ. ಅವರ ಇಚ್ಛೆ ಪ್ರಕಾರ ಎರಡು ಗ್ರಂಥಗಳನ್ನು ಅಂತ್ಯ ಸಂಸ್ಕಾರದ ಜೊತೆಯಲ್ಲಿಯೇ ಇಟ್ಟಿದ್ದರಂತೆ. ಇದರ ಜೊತೆಗೆ ಸಾಹಿತ್ಯದ ಬಗ್ಗೆ ಅವರು ಬರೆದ ಮೌಲಿಕ ಗ್ರಂಥಗಳ ಮೇಲೆ, ಬರಹದ ಮೇಲೆ ಅವರಿಗೆ ಎಷ್ಟು ಅಭಿಮಾನ, ಕಾಳಜಿ ಇತ್ತು ಮತ್ತು ಅದಕ್ಕೆ ಎಷ್ಟು ಮಹತ್ವ ಕೊಡುತ್ತಿದ್ದರು ಎಂದು ಈ ವಿಚಾರದಿಂದ ವ್ಯಕ್ತವಾಗುತ್ತಿದೆ. ಶ್ರೀಯುತ ನಿಧನದಿಂದ ರಾಜ್ಯದ ಸಾಹಿತ್ಯ ಲೋಕವಷ್ಟೇ ಅಲ್ಲದೇ ಇಡೀ ಭಾರತ ದೇಶದ ಸಾಹಿತ್ಯ ಮತ್ತು ಸಾರಸ್ವತ ಲೋಕ ಮಹಾನ್ ದಿಗ್ಗಜರನ್ನು ಕಳೆದುಕೊಂಡು ಅನಾಥವಾಗಿದೆ ಎಂದು ಹೇಳಬಹುದು. ಇವರು ಖ್ಯಾತ ಇತಿಹಾಸ ತಜ್ಞ ಮತ್ತು ಅಂತರರಾಷ್ಟ್ರೀಯ ಶ್ರೇಷ್ಠ ವಿಮರ್ಶಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಾಗೂ ಪ್ರಶ್ನಾತೀತ ವಿಮರ್ಶಕರಾಗಿದ್ದರು. ಇಂತಹ ಹಿರಿಯ ಸಾಹಿತಿ ಹಾಗೂ ಬಹುಮುಖ ವ್ಯಕ್ತಿತ್ವದ ಪ್ರತಿಭೆಯನ್ನು ಕಳೆದುಕೊಂಡಿದ್ದರಿಂದ ರಾಷ್ಟ್ರ ಮಾತ್ರವಲ್ಲದೇ ವಿಶ್ವದ ಸಾಹಿತ್ಯ ಲೋಕ ಬಡವಾಗುವುದರ ಜೊತೆಗೆ ನಾವೆಲ್ಲರೂ ಅವರ ಸಾವಿನಿಂದ ಬಹಳ ನೋವನ್ನು ಅನುಭವಿಸುವ ಸ್ಥಿತಿ ಬಂದಿದೆ. ಈ ಮೂವ್ವರ ನಿಧನದಿಂದ ನಮ್ಮ ಕನ್ನಡ ನಾಡಿಗೆ ತುಂಬಲಾರದ ಹಾನಿ ಹಾಗೂ ಸಾರ್ಥಕ ಬದುಕನ್ನು ಸಾಗಿಸಿದವರು ಎಂದು ಹೇಳುತ್ತೇನೆ. ಒಬ್ಬರು ಮಹಾನುಭಾವರು ಹೇಳುವಂತೆ ಮಗು ಪ್ರಪಂಚಕ್ಕೆ ಅಳುತ್ತಾ ಬಂದರೆ, ಇಡೀ ಪ್ರಪಂಚ ನಗುನಗುತ್ತಾ ಆತನ ಹುಟ್ಟನ್ನು ಸ್ವೀಕಾರ ಮಾಡುತ್ತದೆ. ಆ ಮಗು ಬೆಳೆದು ದೊಡ್ಡವನಾಗಿ ನಾಡು-ನುಡಿಗೆ ಅಥವಾ ಆತ ಆಯ್ಕೆ ಮಾಡಿಕೊಂಡ ಕ್ಷೇತ್ರಕ್ಕೆ ಅವರದೇ ಆದ ಉತ್ತಮ ಕೊಡುಗೆ ನೀಡಿ ನಮ್ಮನ್ನಗಲಿದ ಸಂದರ್ಭದಲ್ಲಿ ಆತನು ನಗುನಗುತ್ತಾ ಹೋದರೆ ನಾವೆಲ್ಲರೂ ಅಳುತ್ತಾ ಬೀಳ್ಕೊಡುತ್ತೇವೆ ಎಂಬ ಮಾತು ನೆನಪಾಗುತ್ತಿದೆ. ಅಂತಹ ಸಾರ್ಥಕ ಬದುಕನ್ನು ಸಾಗಿಸಿದ ಈ ಮೂವ್ವರನ್ನು ಕಳೆದುಕೊಂಡು ನಾವೆಲ್ಲರೂ ಬಡವಾಗಿದ್ದೇವೆ ಎಂದು ಹೇಳುತ್ತಾ, ತಾವು ತಂದ ಸಂತಾಪ ಸೂಚಕ ಗೊತ್ತುವಳಿಗೆ ಅನುಮೋದನೆ ನೀಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರುಃ-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**ಶ್ರೀ ಎಸ್. ಆರ್. ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಫೆಬ್ರವರಿ 25ನೇ ತಾರೀಖಿನಂದು ಕೆಳಮನೆ ಸದಸ್ಯರೊಬ್ಬರು ಒಂದು ಹೇಳಿಕೆಯನ್ನು ನೀಡಿದ್ದಾರೆ.

**ಸಭಾಪತಿಯವರುಃ-** ಈಗ ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆಯ ಮೇಲೆ ಚರ್ಚೆ ಮಾಡುವುದೇ ಅಥವಾ ಪ್ರಶ್ನೋತ್ತರ ವಿಷಯವನ್ನು ತೆಗೆದುಕೊಳ್ಳೋಣವೇ?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2. ಕೆಳಮನೆಯ ಸದಸ್ಯರೊಬ್ಬರು ಸ್ವಾತಂತ್ರ್ಯ ಹೋರಾಟಗಾರ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆನ್ನಲಾದ ವಿಚಾರದ ಬಗ್ಗೆ ಪ್ರಸ್ತಾಪ.**

........

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದಕ್ಕಿಂತ ಪೂರ್ವದಲ್ಲಿ ಫೆಬ್ರವರಿ 25ನೇ ತಾರೀಖಿನಂದು ಕೆಳಮನೆಯ ಸದಸ್ಯರೊಬ್ಬರು ಶತಾಯುಷಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಮಾನ್ಯ ಹೆಚ್.ಎಸ್. ದೊರೆಸ್ವಾಮಿ ರವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, 14 ತಿಂಗಳುಗಳ ಕಾಲ ಜೈಲುವಾಸವನ್ನು ಅನುಭವಿಸಿದವರಾಗಿದ್ದಾರೆ. ಇಂತಹವರ ಬಗ್ಗೆ ಹಗುರವಾಗಿ ಮಾತನಾಡುವುದರಿಂದ ಪರಿಸ್ಥಿತಿ ಏನಾಗಿದೆ ಎಂದು ಹೇಳುತ್ತೇನೆ. ಈ ರೀತಿಯ ವರ್ತನೆ ಸರಿಯಾದುದ್ದಲ್ಲ. ಇದು ಕೇವಲ ಮಾನ್ಯ ಹೆಚ್.ಎಸ್. ದೊರೆಸ್ವಾಮಿ ರವರಿಗೆ ಮಾತ್ರ ಸೀಮಿತವಾದ ಮಾತಾಗಿರುವುದಿಲ್ಲ. ಇವರು ಮಹಾತ್ಮ ಗಾಂಧಿಯವರ ಕೊನೆಯ ಕೊಂಡಿಯಾಗಿದ್ದು, ಅಂತಹವರ ಬಗ್ಗೆ ಮಾತನಾಡುವುದರಿಂದ ಇಡೀ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದ ಎಲ್ಲಾ ಹೋರಾಟಗಾರರಿಗೆ ಅವಮಾನ ಮಾಡುವಂತಹ ಮಾತಾಗಿದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಅನೇಕರು ಹೋರಾಟದಲ್ಲಿ ಪಾಲ್ಗೊಂಡು ಬಹಳ ಕಾಲ ಜೈಲುವಾಸವನ್ನು ಅನುಭವಿಸಿದ್ದಾರೆ. ಬ್ರಿಟಿಷರ ಲಾಠಿ ಹಾಗೂ ಬೂಟಿನ ಏಟಿನ ರುಚಿ ಉಂಡಿದ್ದಾರೆ. ಅಷ್ಟೇ ಅಲ್ಲದೇ ಬ್ರಿಟಿಷರ ಬಂದೂಕಿಗೆ ಎದೆ ಒಡ್ಡಿದವರಿದ್ದಾರೆ. ಬೀದಿ ಬೀದಿಯಲ್ಲಿ ಏರ್ಪಡಿಸಿದ್ದ ನೇಣುಗಂಬಕ್ಕೆ 'ಒಂದೇ ಮಾತರಂ' ಎಂದು ಕೊರಳೊಡ್ಡಿ ನೇಣು ಗಂಬ ಏರಿದ್ದಾರೆ. ಇಂತಹ ದೊಡ್ಡ ತ್ಯಾಗ ಮತ್ತು ಬಲಿದಾನದಿಂದ ಭಾರತ ದೇಶ ಮತ್ತು ಭಾರತ ಮಾತೆ ದಾಸ್ಯ ಸಂಕೋಲೆ ಮತ್ತು ಗುಲಾಮಗಿರಿಯಿಂದ ಬಿಡುಗಡೆಯಾಗಿ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಸ್ವಾತಂತ್ರ್ಯವನ್ನು ಪಡೆದ ನಂತರ ನಮ್ಮ ದೇಶ ಇವತ್ತು ಬಹಳ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಿದೆ. ಪ್ರಪಂಚದಲ್ಲಿಯೇ ಭಾರತ ದೇಶವು ಪ್ರಚಂಡ ರಾಷ್ಟ್ರ ಎಂದು ಅನಿಸಿಕೊಳ್ಳುತ್ತಿದೆ. ಪ್ರತಿಯೊಬ್ಬ ಭಾರತೀಯನೂ ' ನಾನು ಭಾರತೀಯ ' ಎಂದು ಬಹಳ ಹೆಮ್ಮೆ ಮತ್ತು ಗರ್ವದಿಂದ ಹೇಳಿಕೊಳ್ಳುವ ವಾತಾವರಣ ನಿರ್ಮಾಣ ಮಾಡಲು ಸ್ವಾತಂತ್ರ್ಯ ಯೋಧರ ತ್ಯಾಗ ಮತ್ತು ಬಲಿದಾನ ಬಹಳ ಮಹತ್ವದ್ದಾಗಿದೆ.

**(ಗೊಂದಲ)**

ಮಾನ್ಯ ಸಭಾಪತಿಯವರೇ, ನಾನು ಸ್ವಾತಂತ್ರ್ಯ ಯೋಧರ ಬಗ್ಗೆ ಮಾತನಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ|| **ವೈ.ಎ. ನಾರಾಯಣಸ್ವಾಮಿಃ–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಬಹಳ ಗೌರವ ಇದೆ, ಪ್ರಶ್ನೆ ಏನೆಂದರೆ, ಸ್ವಾತಂತ್ರ್ಯ ಯೋಧರ ಬಗ್ಗೆ ಗೌರವ ಇದೆ, ಅವರ ಬಗ್ಗೆ ನಾವೂ ಮಾತನಾಡುತ್ತೇವೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿಃ–** ಸಂವಿಧಾನಕ್ಕೆ ಅಪಚಾರ ಎಸಗಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಸಭಾಪತಿಯವರೇ, ದೇಶದ ಸ್ವಾತಂತ್ರ್ಯಕೋಸ್ಕರ ಬ್ರಿಟಿಷರನ್ನು ದೇಶದಿಂದ ಹೊರದೋಡಿಸಿ, ದಾಸ್ಯ ಸಂಕೋಲೆಯಿಂದ ಬಿಡುಗಡೆ ಮಾಡಲು ಬಹುದೊಡ್ಡ ತ್ಯಾಗ ಮತ್ತು ಬಲಿದಾನ ಮಾಡಿದಂತಹ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಈ ರೀತಿ ಮಾತನಾಡಿರುವುದು ಬಹು ದೊಡ್ಡ ಅನ್ಯಾಯ.

(ಮುಂದು)

(113)/02.03.2020/ಹೆಚ್‌ವಿ–ವಿಕೆ

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, ನಾವು ತಪ್ಪು ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಹೆಚ್.ಎಸ್. ದೊರೆಸ್ವಾಮಿಯವರು ನಮ್ಮನ್ನು ಸಹ ದಂಡಿಸಿದ್ದರು.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಹೋರಾಟಗಾರರಾದ ಮಾನ್ಯ ಹೆಚ್.ಎಸ್.ದೊರೆಸ್ವಾಮಿಯವರ ಬಗ್ಗೆ ನಮಗೂ ಗೌರವವಿದೆ. ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ ನಂತರ ಈ ವಿಚಾರದ ಬಗ್ಗೆ ಮಾತನಾಡಲು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಾವು ಅವಕಾಶವನ್ನು ನೀಡಬಹುದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಒಬ್ಬ ಸ್ವಾತಂತ್ರ್ಯ ಹೋರಾಟಗಾರ ನಮಗೆ ಮಾರ್ಗದರ್ಶನ ಮಾಡಿದಾಗ, ಅದನ್ನು ನಾವು ಸಂತೋಷದಿಂದ ಸ್ವೀಕರಿಸಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಯಾವ ನಿಯಮದಡಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ ಎನ್ನುವುದನ್ನು ತಾವು ಹೇಳಬೇಕಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಸ್.ದೊರೆಸ್ವಾಮಿಯವರು ಸ್ವಾತಂತ್ರ್ಯ ಹೋರಾಟಗಾರರು ಮಾತ್ರವಲ್ಲ, ಮಹಾತ್ಮಗಾಂಧಿಯವರ ಕೊನೆಯ ಕೊಂಡಿಯಾಗಿದ್ದಾರೆ. ಇವರಿಗೆ ಅವಮಾನ ಮಾಡುವುದು ರಾಷ್ಟ್ರಪಿತ ಮಹಾತ್ಮಗಾಂಧಿಯವರಿಗೆ ಅವಮಾನ ಮಾಡಿದಂತಾಗುತ್ತದೆ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಬಗ್ಗೆ ನಮ್ಮೆಲ್ಲರಿಗೂ ಗೌರವವಿದೆ. ಅವರು ಪ್ರಸ್ತಾಪ ಮಾಡುತ್ತಿರುವ ವಿಚಾರವಾಗಿ ಚರ್ಚೆ ಮಾಡುವುದಕ್ಕೆ ನಾವೆಲ್ಲರೂ ತಯಾರಿದ್ದೇವೆ. ಮೊದಲು ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಿ, ನಂತರ ಈ ವಿಚಾರದ ಮೇಲೆ ಮಾತನಾಡಲು ಅವಕಾಶವನ್ನು ನೀಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರ ಮಾತನ್ನು ಬೆಂಬಲಿಸಿ, ಅವರ ಪರವಾಗಿ ಮಾತನಾಡಿ, ಸಂಪೂರ್ಣ ಸಚಿವ ಸಂಪುಟ ಅವರಿಗೆ ಬೆಂಬಲವನ್ನು ನೀಡಿದೆ. ಇದರ ಜೊತೆಗೆ ಅನೇಕ ಭಾರತೀಯ ಜನತಾ ಪಕ್ಷದ ಸದಸ್ಯರು ಅದಕ್ಕೆ ಬೆಂಬಲವನ್ನು ಸೂಚಿಸಿದ್ದಾರೆ. Is it good?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೆ, ವೀರ ಸಾವರ್ಕರ್ ಬಗ್ಗೆ ಮಾತನಾಡಿದಂತಹ ಸಂದರ್ಭದಲ್ಲಿ ಇವರು ಏಕೆ ಸುಮ್ಮನಿದ್ದರು?

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಹೋರಾಟಗಾರರಾದ ವೀರ್ ಸಾವರ್ಕರ್ ಬಗ್ಗೆ ಇವರ ಪಕ್ಷದವರೇ ಟೀಕೆ ಮಾಡಿದಂತಹ ಸಂದರ್ಭದಲ್ಲಿ ಇವರು ಏತಕ್ಕೋಸ್ಕರ ಪ್ರಶ್ನೆ ಮಾಡಲಿಲ್ಲ. ಅದರ ಬಗ್ಗೆಯೂ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಯಾವುದೇ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ನಾವು ಗೌರವದಿಂದ ಮಾತನಾಡಬೇಕಾಗುತ್ತದೆ. ಅವರ ಬಗ್ಗೆ ಅಗೌರವವಾಗಿ ಮಾತನಾಡುವುದು ತಪ್ಪು ಎನ್ನುವುದು ನನ್ನ ಭಾವನೆಯಾಗಿದೆ.

**(ಗೊಂದಲ)**

**ಸಭಾಪತಿಯವರುಃ–** ಈಗ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿರುವ ಭಾಷಣದ ಮೇಲೆ ಚರ್ಚೆ. ಮಾನ್ಯ ಬೋಸ್‌ರಾಜ್‌ರವರೇ ತಾವು ತಮ್ಮ ಮಾತುಗಳನ್ನು ಪ್ರಾರಂಭಿಸಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಎರಡೇ ನಿಮಿಷದಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಂತಹ ಸಂದರ್ಭದಲ್ಲಿ ನಮ್ಮ ದೇಶದ ಪರಿಸ್ಥಿತಿ ಯಾವ ರೀತಿಯಲ್ಲಿತ್ತು ಎಂದರೆ, ಶೇಕಡಾ 75ರಷ್ಟು ಜನರು ನಿರಕ್ಷರಕುಕ್ಷಿಗಳಾಗಿದ್ದರು. ಶೇಕಡಾ 75ರಷ್ಟು ಜನರಿಗೆ ತಲೆಯ ಮೇಲೆ ಸೂರಿರಲಿಲ್ಲ ಮತ್ತು ಶೇಕಡಾ 75ರಷ್ಟು ಜನರು ದಿನದಲ್ಲಿ ಒಂದು ಹೊತ್ತು ಮಾತ್ರ ಊಟ ಮಾಡುವಂತಹ ಪರಿಸ್ಥಿತಿ ಇತ್ತು. ಆಗ ಮಿಲಿಟರಿ ಶಕ್ತಿ ಎಷ್ಟಿತ್ತು ಎಂದರೆ, ಒಂದೆರಡು ಮುರುಕು ಟ್ಯಾಂಕರ್‌ಗಳು ಮತ್ತು ಮೇಲೆ ಹಾರಾಡುವುದಕ್ಕೆ ಸಾಧ್ಯವಾಗದೇ ಇರುವಂತಹ ವಿಮಾನಗಳು ಇದ್ದವು. ಗಡಿ ಕಾಯುವುದಕ್ಕೆ ಸೈನಿಕರು ಇರಲಿಲ್ಲ. ಈಗ ಇಡೀ ಜಗತ್ತಿನಲ್ಲಿಯೇ ಬಲಿಷ್ಠವಾಗಿರುವ ಮಿಲಿಟರಿ ಶಕ್ತಿಯನ್ನು ಹೊಂದಿರುವ ರಾಷ್ಟ್ರವಾಗಿದೆ. We have got 5$^{th}$

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

strongest Military Force in the world. ಒಂದು ಹೊತ್ತಿನ ಊಟವೂ ಇರದಿದ್ದ ಪರಿಸ್ಥಿತಿಯಿಂದ ಹೊರಬಂದು ಇವತ್ತು ನಾವು ಸ್ವಾವಲಂಬಿಗಳಾಗಿದ್ದೇವೆ. ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ National Food Security Act ನ್ನು ಜಾರಿಗೆ ತಂದಿತ್ತು. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಿದ್ದರು. ಅವರುಗಳ ಹಿತದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ.

**ಸಭಾಪತಿಯವರುಃ–** ಮಾನ್ಯ ಬೋಸ್‌ರಾಜ್‌ರವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಪ್ರಾರಂಭಿಸಿ.

**ಡಾ॥ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗುವುದಕ್ಕೂ ಮೊದಲೇ National Food Security Act ಜಾರಿಯಲ್ಲಿತ್ತು.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಅವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಸರಿಯಾದುದ್ದಲ್ಲ. ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡುವುದು ಇಡೀ ದೇಶಕ್ಕೆ ಅವಮಾನ ಮಾಡಿದಂತೆ.

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದು ಸರಿಯಿದೆ. ಸ್ವಾತಂತ್ರ್ಯ ಹೋರಾಟಗಾರರಾದ ಮಾನ್ಯ ಹೆಚ್.ಎಸ್.ದೊರೆಸ್ವಾಮಿಯವರು ದೇಶದ ಪರವಾಗಿರಬೇಕೇ ಹೊರತು, ದೇಶದ ವಿರುದ್ಧವಾಗಿ ಇರಬಾರದು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜ್ಃ–** ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ಅಜೆಂಡಾ ಪ್ರಕಾರ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, .........

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬಸವರಾಜ್ ಹೊರಟ್ಟಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಾದರೆ ಮಾತನಾಡಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ಸರ್ಕಾರ ಉತ್ತರ ನೀಡಿದರೆ, ಸದನ ಸುಸೂತ್ರವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಮೇಲೆ ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶವನ್ನು ನೀಡಿ.

**(ಗೊಂದಲ)**

**ಸಭಾಪತಿಯವರು:–** ಎಲ್ಲರಿಗೂ ಅವಕಾಶ ನೀಡುವುದಕ್ಕೆ ಸಾಧ್ಯವಿಲ್ಲ. ಈಗ ಸರ್ಕಾರದಿಂದ ಉತ್ತರ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಹಗುರವಾಗಿರುವ ವಿಚಾರವಲ್ಲ. ಆದ್ದರಿಂದ ಈ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಈ ಸದನಕ್ಕೆ ಆಗಮಿಸಿ ಉತ್ತರವನ್ನು ನೀಡಬೇಕಾಗುತ್ತದೆ. ಇದು ಕೇವಲ ಹೆಚ್.ಎಸ್.ದೊರೆಸ್ವಾಮಿಯವರಿಗೆ ಸೀಮಿತವಾಗಿರುವ ವಿಚಾರವಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿರುವ ಸಮಸ್ತ ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡಿದಂತಾಗಿದೆ ಹಾಗೂ ರಾಷ್ಟ್ರಪಿತ ಮಹಾತ್ಮಗಾಂಧಿಯವರಿಗೆ ಅವಮಾನ ಮಾಡಿದಂತಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಯೋಧರಾದ ವೀರ್ ಸಾವರ್ಕರ್‌ರವರು ಮಾನ್ಯ ಹೆಚ್.ಎಸ್.ದೊರೆಸ್ವಾಮಿಯವರಿಗಿಂತ ದೊಡ್ಡವರು. ಅವರಿಗೆ ಅವಮಾನ ಮಾಡಬಹುದೇ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದಲ್ಲಿ ಯಾರೂ ಸ್ವಾತಂತ್ರ್ಯ ಹೋರಾಟಗಾರರಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಇವರ ವರ್ತನೆಯನ್ನು ಖಂಡಿಸಿ ನಾವು ಸದನದ ಬಾವಿಗಿಳಿದು ಧರಣಿ ನಡೆಸುತ್ತಿದ್ದೇವೆ.

**(ಈ ಹಂತದಲ್ಲಿ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಉಳಿದ ಎಲ್ಲ ಸದಸ್ಯರುಗಳು ಸದನದ ಬಾವಿಯೊಳಗೆ ಧರಣಿ ನಿಂತರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಇಲ್ಲದಿರುವ ವ್ಯಕ್ತಿಯ ಬಗ್ಗೆ ಹಗುರವಾಗಿ ಮಾತನಾಡುವ ಅಧಿಕಾರ ಅವರಿಗಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್ಃ–** ಸನ್ಮಾನ್ಯ ಸಭಾಪತಿಯವರೇ, ..........

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಸಭಾಪತಿಯವರುಃ–** ಮಾನ್ಯ ವಿರೋಧಪಕ್ಷದ ನಾಯಕರೇ, ನೋಟೀಸ್ ನೀಡದೇ ಈ ರೀತಿ ಮಾತನಾಡಲು ಪ್ರಾರಂಭಿಸಿದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಇವರುಗಳು ಈ ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ. ವೀರ್ ಸವಾರ್ಕರ್ ಎಂದರೆ ಯಾರು ಎನ್ನುವುದು ಗೊತ್ತಿಲ್ಲದೆ ಇರುವವರು ವೀರ್ ಸವಾರ್ಕರ್ ಬಗ್ಗೆ ಮಾತನಾಡಿದಾಗ, ಇವರುಗಳು ಅವರನ್ನು ಸಮರ್ಥಿಸಿಕೊಂಡಿದ್ದರು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ)ಃ–** ಸನ್ಮಾನ್ಯ ಸಭಾಪತಿಯವರೇ, ಈ ನಾಡಿನ ಅತ್ಯಂತ ಹಿರಿಯ ಸ್ವಾತಂತ್ರ್ಯ ಸೇನಾನಿ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರು ಇಡೀ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗಿದ್ದವರು. ಅವರನ್ನು ‘ಪಾಕಿಸ್ತಾನದ ಏಜೆಂಟ್’ ಎಂದು ಹೇಳಿರುವ ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರ ಹೇಳಿಕೆಯನ್ನು ಸಂಪೂರ್ಣವಾಗಿ ಧಿಕ್ಕರಿಸುತ್ತಿರುವ ಜಾತ್ಯಾತೀತ ಜನತಾ ದಳ ಪಕ್ಷವೂ ಈ ಹೋರಾಟಕ್ಕೆ ತನ್ನ ಸಂಪೂರ್ಣವಾಗಿರುವ ಬೆಂಬಲವನ್ನು ಸೂಚಿಸುತ್ತದೆ.

**(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿ ನಿರತ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸರ್ಕಾರದ ನೀತಿಯನ್ನು ಖಂಡಿಸಿ ‘ಧಿಕ್ಕಾರ’ ಕೂಗಿದರು)**

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಸಂವಿಧಾನದಲ್ಲಿರುವ ಕೆಲವು ಅಂಶಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ನಾಡಿನ ಇತಿಹಾಸದಲ್ಲಿ ಕಂಡರಿಯದ ಮತ್ತು ಕೇಳರಿಯದೇ ಇರುವ ಘಟನೆ ಇಂದು ನಾಡಿನ ಜನತೆಗೆ ಸಂದೇಶದ ರೂಪದಲ್ಲಿ ಹೋಗಿದೆ. ರಾಷ್ಟ್ರದ ಅಭಿಮಾನದ ಬಗ್ಗೆ ಮಾತನಾಡುವ.........

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಹಿರಿಯ ಸದಸ್ಯರಾಗಿರುವ ಮಾನ್ಯ ಆಯನೂರು ಮಂಜುನಾಥ್‌ರವರು ಒಂದು ಹೇಳಿಕೆಯನ್ನು ನೀಡಿ 'ಈ ರೀತಿ ಮಾತನಾಡಬಾರದಾಗಿತ್ತು. ಇದು ಸ್ವಾತಂತ್ರ್ಯ ಸೇನಾನಿ ದೊರೆಸ್ವಾಮಿಯವರಿಗೆ ಮಾಡಿರುವ ಅವಮಾನವಲ್ಲ ಇಡೀ ದೇಶದ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿರುವ ಅವಮಾನ' ಎನ್ನುವ ಮಾತನ್ನು ಹೇಳಿದ್ದಾರೆ.

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿಃ-** ಸನ್ಮಾನ್ಯ ಸಭಾಪತಿಯವರು, ಇವರುಗಳು ಸದನದ ಅಮೂಲ್ಯ ಸಮಯವನ್ನು ಹಾಳು ಮಾಡುತ್ತಿದ್ದಾರೆ. ತಾವು ಅವರಿಗೆ ಬುದ್ಧಿ ಹೇಳಬೇಕಾಗಿದೆ.

**(ಗೊಂದಲ)**

**ಸಭಾಪತಿಯವರುಃ-** ವಿರೋಧ ಪಕ್ಷದ ಸದಸ್ಯರೆಲ್ಲರೂ ತಮ್ಮತಮ್ಮ ಸ್ಥಾನಕ್ಕೆ ಮರಳಬೇಕು.

**(ಗೊಂದಲ)**

**ಸಭಾಪತಿಯವರುಃ-** ಈಗ ಸದನವನ್ನು 1.00 ಗಂಟೆಯವರೆಗೆ ಮುಂದೂಡಲಾಗಿದೆ.

(114)2-3-2020/1-10/ಬಿಕೆಪಿ-ಬಿಎನ್‌ಎಸ್.

**(11 ಗಂಟೆ 49 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಪಕ್ಷದ ಸದಸ್ಯರುಗಳು ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ವಿರೋಧ ಪಕ್ಷದ ವತಿಯಿಂದ ಏನು ಹೇಳುತ್ತಾರೋ ಅದರ ಬಗ್ಗೆ ಚರ್ಚೆ ಮಾಡೋಣ. ಅದಕ್ಕೆ ಅವರುಗಳು ನಿಯಮದ ಪ್ರಕಾರ ಒಂದು ನೋಟೀಸ್ ಕೊಡಬೇಕಲ್ಲವೇ! ಅವರು ಒಂದು ನೋಟಿಸ್ ಕೊಟ್ಟು ತಮ್ಮ ಅನುಮತಿ ಜೊತೆಗೆ ಚರ್ಚೆ ಮಾಡಲಿ. ಅವರು ಕೇಳಿದಂತಹ ಎಲ್ಲಾ ಪ್ರಶ್ನೆಗಳಿಗೂ ಸಹ ಸರ್ಕಾರ ಉತ್ತರ ಕೊಡಲಿಕ್ಕೆ ಸಿದ್ಧವಿದೆ. ಅದನ್ನು ಬಿಟ್ಟು ಏಕಾಏಕಿ ಎದ್ದು ನಿಂತು ಈ ರೀತಿ ಮಾತನಾಡಿದರೆ ಹೇಗೆ?

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ತಮ್ಮ ಸದಸ್ಯರುಗಳನ್ನು ತಮ್ಮ ತಮ್ಮ ಸ್ಥಾನಕ್ಕೆ ಬರಲಿಕ್ಕೆ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಪ್ರತಿ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ ವಿರೋಧ ಪಕ್ಷದ ನಾಯಕರು ಈ ಹಿಂದೆ ಇಲ್ಲಿ ಸಭಾನಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಂತಹ ಸಂದರ್ಭದಲ್ಲಿ ಏನು ಹೇಳಿದ್ದಾರೆಂದರೆ, ಯಾವುದೇ ವಿಚಾರಗಳನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಅನುಮತಿ ಪಡೆದು ನೋಟೀಸ್ ಕೊಟ್ಟು ಚರ್ಚೆ ಮಾಡಬೇಕೆನ್ನುವ ಮಾತನ್ನು ಹೇಳಿರುವುದು ಕಡತಗಳಲ್ಲಿ ನೋಡಬಹುದು.

**(ಗೊಂದಲ)**

ಹೀಗಿರುವಾಗ ವಿರೋಧ ಪಕ್ಷದ ವತಿಯಿಂದ ಈ ವಿಚಾರವಾಗಿ ಚರ್ಚೆ ಮಾಡಬೇಕೆಂದರೆ ಮೊದಲು ತಮಗೆ ನೋಟೀಸ್ ಕೊಡಬೇಕಲ್ಲವೇ? ನೋಟೀಸ್ ಕೊಡುವುದು ಅವರ ಧರ್ಮ. ಮೊದಲು ನೋಟೀಸ್ ಕೊಡಲಿ.

**(ಗೊಂದಲ)**

**ಶೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾನ್ಯ ಶ್ರೀ ಕೆ.ಎಸ್.ಈಶ್ವರಪ್ಪ ನವರು ಪ್ರತಿಪಕ್ಷದ ನಾಯಕರಾಗಿ ಕೆಲಸ ನಿರ್ವಹಿಸಿದ್ದಾರೆ. ಆಗ ನಾನು ಅಲ್ಲಿ ಸಭಾನಾಯಕರ ಸ್ಥಾನದಲ್ಲಿ ಕೆಲಸ ನಿರ್ವಹಿಸುತ್ತಿದ್ದೆ. ನಾನು ನಿಯಮಾವಳಿಗಳ ಬಗ್ಗೆ ಹೇಳುತ್ತಿದ್ದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಅವರು ನಿಯಮಾವಳಿಯ ಪುಸ್ತಕ ತೆಗೆದು ಬಿಸಾಕಿ ಎಂದು ಹೇಳುತ್ತಿದ್ದರು. ನಾನು Rules of Procedure ಬಗ್ಗೆ ಹೇಳಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಹಾಗಾದರೆ, ಹಿಂದಿನವರು ಏನು ಹೇಳಿದ್ದಾರೆ, ಅದನ್ನೇ ನೀವು ಮಾಡುತ್ತೀರಾ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ನಾನು Rules of Procedure ಬಗ್ಗೆ ಹೇಳಿದಂತಹ ಸಂದರ್ಭದಲ್ಲಿ ಅದನ್ನು ತೆಗೆದು ಬಿಸಾಕಿ ಎಂದವರು ಹೇಳಿದರು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೊದಲು ನೋಟೀಸ್ ಕೊಡಲಿಕ್ಕೆ ಹೇಳಿ. ಅದರ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಶ್ರೀ ಕೆ.ಎಸ್.ಈಶ್ವರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಹೇಳಿದ್ದರ ಬಗ್ಗೆ ನಾನು authenticate ಆಗಿ ಮಾತನಾಡುತ್ತಿದ್ದೇನೆ. ನಾನು ಹಿಂದೆ 3 ವರ್ಷ, ಎರಡು ತಿಂಗಳ ಕಾಲ ಸಭಾನಾಯಕರ ಸ್ಥಾನದಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

**(ಗೊಂದಲ)**

**ಸಭಾಪತಿಗಳು:-** ಶ್ರೀ ಕೆ.ಎಸ್.ಈಶ್ವರಪ್ಪನವರು ಹೇಳಿದ್ದು ನಿಯಮವಾಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರು ನಿಯಮದ ಬಗ್ಗೆ ಹೇಳಿದ್ದರಿಂದ ನಾನು ಆ ಬಗ್ಗೆ ಹೇಳಿದೆ ಅಷ್ಟೆ. I will abide by the Rules. More than that, I will abide by the direction of Hon'ble Chairman. I respect the Chair.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ತಮ್ಮ ಸ್ಥಾನದ ಬಗ್ಗೆ ಅಪಾರ ಗೌರವ ಇದೆ. ತಾವು ಏನು ಆದೇಶ ಕೊಡುತ್ತೀರಿ. ಅದನ್ನು ನಾವು ಪಾಲನೆ ಮಾಡುತ್ತೇವೆ. There is no disrespect for the Chair.

**(ಗೊಂದಲ)**

**ಶ್ರೀ ಎಸ್.ಎಲ್.ಬೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಸಭಾನಾಯಕರು ಈಗ ನಿಯಮದ ಬಗ್ಗೆ ಮಾತನಾಡಿದ್ದಾರೆ. ಬಹಳ ಸಂತೋಷ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಪ್ರಸ್ತಾವನೆ ಮಾಡಿದ ಹಾಗೆ ನಿಯಮಾವಳಿಗಳ ಪಾಲನೆ ಈಗ ಆಗಿಲ್ಲ. ನೋಟಿಸ್ ಕೊಡದೇ ಪ್ರಸ್ತಾವನೆ ಆಗಿದೆ. ಪ್ರಸ್ತಾವನೆ ಆಗಿ ವಿರೋಧ ಪಕ್ಷದ ಸದಸ್ಯರು well ಗೆ ಬಂದೂ ಆಗಿದೆ. ಇದು ಒಂದು ವಿಚಾರ. ಎರಡನೆಯದು ಬಹಳ ದೊಡ್ಡ ಕ್ರಿಯಾ ಲೋಪ ಎಂದರೆ ಈ ಸದನದ ಸದಸ್ಯರು ಅಲ್ಲದೇ ಇರತಕ್ಕಂತಹ ಒಬ್ಬ ವ್ಯಕ್ತಿ ಹೊರಗಡೆ ಎಲ್ಲಿಯೋ ಮಾತನಾಡಿದ್ದನ್ನು ಆಧಾರವಾಗಿಟ್ಟುಕೊಂಡು ಮೇಲ್ಮನೆಯಲ್ಲಿ ಅವರು ಕ್ಷಮೆ ಕೇಳಬೇಕೆನ್ನುವ ಬಗ್ಗೆ ನಮ್ಮ ನಿಯಮಾವಳಿಯಲ್ಲಿ ಅವಕಾಶವಿಲ್ಲ. ಹೀಗಾಗಿ, ಇದು ಮೇಲ್ಮನೆ, ಹಿರಿಯರ ಮನೆ. ನಿಯಮಾವಳಿಗಳನ್ನು ಮೀರಿ ನಡೆದುಕೊಂಡು ಬೇರೆ ಕೆಟ್ಟ ಪಂಕ್ತಿಗಳನ್ನು ಹಾಕಬಾರದು. ಎಲ್ಲಿಯೂ ಅವಕಾಶವಿಲ್ಲ. ಈ ಮನೆ ಸದಸ್ಯ ಅಲ್ಲದವರು ಕ್ಷಮೆ ಕೇಳಬೇಕೆನ್ನುವ ಒತ್ತಡ ಹಾಕಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ ಈಗ ಹೌಸ್ ಆರ್ಡರ್‌ನಲ್ಲಿ ಇಲ್ಲ. ದಯಮಾಡಿ ವಿರೋಧ ಪಕ್ಷದ ನಾಯಕರಿಗೆ ಸಮಜಾಯಿಷಿ ಹೇಳಬೇಕು. ಅವರು ಅತ್ಯಂತ ಹಿರಿಯ ಸದಸ್ಯರಿದ್ದು, ಅವರೇ ಈ ವಿಚಾರದಲ್ಲಿ ಕೆಟ್ಟ ಮೇಲ್ಪಂಕ್ತಿ ಹಾಕಬಾರದು ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ವಿರೋಧ ಪಕ್ಷದ ನಾಯಕರಾಗಿ ಕುಳಿತಂತಹ ದಿನಗಳನ್ನು ಸ್ವಲ್ಪ ನೆನಪು ಮಾಡಿಕೊಳ್ಳಬೇಕಾಗುತ್ತದೆ. ನಿಯಮಾವಳಿಗಳ ಬಗ್ಗೆ ಈಗ ಬಹಳ ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ಈಗ ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜನಾಥ್ ರವರು ಮೇಲ್ಪಂಕ್ತಿ ಬಗ್ಗೆ ಹೇಳಿದರು. ಮಾನ್ಯ ಸಭಾನಾಯಕರು ಈ ಕಡೆ ಕುಳಿತುಕೊಂಡಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾಗಿ ಹಾಕಿಕೊಟ್ಟಂತಹ ಮೇಲ್ಪಂಕ್ತಿಯನ್ನೇ ನಾವು ಅನುಕರಣೆ ಮಾಡುತ್ತಿದ್ದೇವೆ. ಹೀಗಾಗಿ, ಆ ದಿನಗಳನ್ನು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾನಾಯಕರು ಒಮ್ಮೆ ನೆನಪು ಮಾಡಿಕೊಂಡರೆ ಈ ಮಾತುಗಳನ್ನು ಆಡುವುದರಲ್ಲಿ ಅರ್ಥವಿಲ್ಲ ಎಂದು ನಾನು ಕೂಡ ಭಾವಿಸಿದ್ದೇನೆ. ಹೀಗಾಗಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ, ಪಕ್ಷಾತೀತರಾದಂತಹವರ ಬಗ್ಗೆ ಮಾತನಾಡಿರತಕ್ಕಂತಹ ವಿಚಾರದಲ್ಲಿ ನಾವು ಬಂದಿದ್ದೇವೆ. ಈ ವಿಚಾರದಲ್ಲಿ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

**ಸಭಾಪತಿಯವರು:-** ಬಾವಿಯಲ್ಲಿ ಧರಣಿ ನಿರತರಾದ ಸದಸ್ಯರನ್ನು ತಮ್ಮ ತಮ್ಮ ಸ್ಥಾನಕ್ಕೆ ಬರಲಿಕ್ಕೆ ವಿರೋಧ ಪಕ್ಷದ ನಾಯಕರು ಸೂಚಿಸಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅಯನೂರು ಮಂಜುನಾಥ್‌ರವರು ಈಗ ಏನು ಹೇಳಿದರು, ಅದರ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. M.N.Kaul and S.L.Shakdher ಇವರ Practice and Procedure of Parliament, ಈ ಪುಸ್ತಕದ Chapter XII ರಲ್ಲಿ ಸದಸ್ಯರ ನಡವಳಿಕೆ ಬಗ್ಗೆ ಸ್ಪಷ್ಟವಾಗಿ ಉಲ್ಲೇಖ ಮಾಡಲಾಗಿದೆ. ಸಂಸದೀಯ ವ್ಯವಸ್ಥೆಯಲ್ಲಿ ಉನ್ನತ ಸಂಪ್ರದಾಯವನ್ನು ಅಳವಡಿಸಿಕೊಳ್ಳಬೇಕು. ಸಂಸದೀಯ ಜೀವನದಲ್ಲಿರುವವರು ಸದನದ ಒಳಗಡೆ ಮತ್ತು ಹೊರಗಡೆ ಉತ್ತಮ ನಡವಳಿಕೆಯನ್ನು ಹೊಂದಿರಬೇಕು. ಸದನದ ಹೊರಗಡೆ ವಿಚಾರ ಬಗ್ಗೆ ಇಲ್ಲಿ ಸಂಬಂಧವಿಲ್ಲವೆಂದು ಇವರು ಹೇಳುತ್ತಾರೆ. ಸದನದ ಗೌರವ ಮತ್ತು ಘನತೆ ಹಾಳಾಗದ ರೀತಿಯಲ್ಲಿ ಸದಸ್ಯರ ನಡವಳಿಕೆ ಇರಬೇಕು. ಇದನ್ನೇ ಇಂಗ್ಲೀಷ್‌ನಲ್ಲಿ ಈ ರೀತಿ ಹೇಳಲಾಗಿದೆ;

**Conduct of Members**

*"In order to maintain the highest traditions in parliamentary life, members of Parliament are expected to observe a certain standard of conduct, both inside the House as well as outside it. Their behaviour should be such as to enhance the dignity of Parliament and its members in general. The conduct of members should not be contrary to the usage, or derogatory to the dignity of the*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*House or in any way inconsistent with the standards which Parliament is entitled to expect of its members."*

ಅಂದರೆ, ಸದಸ್ಯರು ಅನುಚಿತವಾಗಿ ವರ್ತಿಸಿದಾಗ ಸದಸ್ಯರ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರ ಸದನಕ್ಕೆ ಇರುತ್ತದೆ. ಸದನದ ಸದಸ್ಯರ ನಡವಳಿಕೆ ಹೇಗೆ ಇರಬೇಕೆನ್ನುವ ಬಗ್ಗೆ ಸ್ಪಷ್ಟವಾಗಿ ಮತ್ತು ನಿರ್ದಿಷ್ಟವಾಗಿ ನಿಯಮಾವಳಿಗಳು ಇಲ್ಲವಾದರೂ ಸದನಕ್ಕೆ ಯಾವುದೇ ಸದಸ್ಯನಿಂದ ಘನತೆ ಗೌರವಕ್ಕೆ ಚ್ಯುತಿ ಬಂಧಿದೆ ಎಂದು ಅನಿಸಿದರೆ ಸದನದ ನಿಂದನೆ ಎಂದು ಪರಿಗಣಿಸಬೇಕು. ತಾವುಗಳು ಇಲ್ಲಿ ದಯಮಾಡಿ ಗಮನಿಸಬೇಕು. It amounts to contempt of the House.

**(ಗೊಂದಲ)**

ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್ ರವರ ಬಗ್ಗೆ ನನಗೆ ಗೌರವ ಇದೆ. He is a good Parliamentarian. ಅದರ ಬಗ್ಗೆ ಎರಡು ಮಾತಿಲ್ಲ. ಪುಸ್ತಕದಲ್ಲಿ ಬಹಳ ಸ್ಪಷ್ಟವಾಗಿದೆ.

**(ಗೊಂದಲ)**

**ಶ್ರೀ ಎಸ್.ವಿ.ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಹಲವಾರು ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು.

(ಗೊಂದಲ)

**ಸಭಾಪತಿಯವರು:–** ಈ ಬಗ್ಗೆ ಮಾತನಾಡಲು ನಾನು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರನ್ನು ಕರೆಯುತ್ತಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಒಂದೆರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಕೊನೆಯ ಪಕ್ಷ ಸಂಪುಟ ಸದಸ್ಯರು ಈ ರೀತಿಯಲ್ಲಿ ಮಾತನಾಡಬಾರದಾಗಿತ್ತು, ತಪ್ಪಾಯಿತು ಎಂದು ಒಬ್ಬರು ಹೇಳಲಿಲ್ಲ. ಅದರ ಬದಲಿಗೆ defend ಮಾಡಿದರು. ಕೊನೆಯ ಪಕ್ಷ ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಇಲ್ಲ, ನಮ್ಮ ಸದಸ್ಯರು ಮಾತನಾಡಬಾರದಾಗಿತ್ತು, ಇಡೀ ಸ್ವಾತಂತ್ರ್ಯ ಹೋರಾಟಗಾರರ ಸಂಕುಲನಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಅವಮಾನಕರವಾದ ಘಟನೆ ಆಗಿದೆ ಎಂದು ಹೇಳಿ ಮುಖ್ಯಮಂತ್ರಿಗಳು ವ್ಯಕ್ತ ಮಾಡಿದ್ದರೆ, that matter would have been ended most peacefully.

**(ಗೊಂದಲ)**

**ಶ್ರೀ ಎಸ್.ವ್ವಿ.ಸಂಕನೂರ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಬಾವಿಯಲ್ಲಿ ನಿಂತುಕೊಂಡು ಮಾತನಾಡಬಾರದು. ಈಗ ಆ ಮನೆ ಸದಸ್ಯರ ಬಗ್ಗೆ ಇಲ್ಲಿ ಚರ್ಚೆ ಮಾಡಬಾರದೆಂದು ಸದಸ್ಯರಾದ ಶ್ರೀ ಆಯನೂರು ಮಂಜುನಾಥ್ ರವರು ಹೇಳಿದರು. ಆ ಮನೆಯ ಸದಸ್ಯರೊಬ್ಬರು ನಿಧನ ಹೊಂದಿದಾಗ ಈ ಮನೆಯಲ್ಲಿ ಸಂತಾಪ ಸೂಚನೆ ಮಾಡುವುದಿಲ್ಲವೇ? ಮತ್ತೆ, ಆ ಮನೆಯಲ್ಲಿ ಯಾವುದೋ ಒಂದು ವಿಚಾರ ಚರ್ಚೆ ನಡೆದಂತಹ ಸಂದರ್ಭದಲ್ಲಿ ಆ ವಿಚಾರವಾಗಿ ಇಲ್ಲಿಯೂ ಚರ್ಚೆ ಮಾಡಲಾಗುತ್ತದೆ. ಯಾವುದೇ ಒಬ್ಬ ಸದಸ್ಯರು ಅಂದರೆ, ಈ ಮನೆ ಇರಬಹುದು, ಆ ಮನೆ ಇರಬಹುದು. ಆ ಸದಸ್ಯರು ಹೇಳಿದಂತಹ ವಿಚಾರ ಎಲ್ಲರಿಗೂ ಸಂಬಂಧಪಟ್ಟ ವಿಚಾರವಾಗಿರುತ್ತದೆ. ಇದು ಒಂದು ವಿಚಾರ.

ಎರಡನೆಯದಾಗಿ, ನೋಟೀಸ್ ಕೊಡಿ ಎಂದು ತಾವು ಹೇಳುತ್ತೀರಿ. ಇವರು ನೋಟೀಸ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಮತ್ತೆ ದಾರಿ ಯಾವುದು ಇದೆ? ಇಂತಹದ್ದೇ ವಿಚಾರ ಹಿಂದೆ ಒಂದು ಬಾರಿ ಆಗಿತ್ತು. ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರ ವಿಚಾರವಾಗಿ ಶ್ರೀ ಜನಾರ್ಧನ ರೆಡ್ಡಿಯವರು ನಾನು ಕ್ಷಮೆ ಕೇಳುವುದಿಲ್ಲವೆಂದು ಹೇಳಿದರು. ಈ ಬಗ್ಗೆ 2–3 ದಿವಸಗಳ ಕಾಲ ಚರ್ಚೆಯಾಗಿ ಈ ಬಗ್ಗೆ ವಿನಂತಿ ಮಾಡಿಕೊಳ್ಳಲಾಯಿತು. ಆದರೆ, ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ಏನಾಯಿತು ಎಂದರೆ, ಆಗ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀ ಬಿ.ಎಸ್.ಯಡಿಯೂರಪ್ಪ ಈ ವಿಚಾರವಾಗಿ ಕ್ಷಮೆ ಕೇಳುತ್ತೇನೆ ಎಂದು ಹೇಳಿದರು. ಆಗ ಆ ವಿಷಯ ಮುಕ್ತಾಯವಾಯಿತು.

**ಮುಂದು. . .**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(115) 02.03.2020 01.20 ಎಸ್‌ವಿ-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):-** ಹೀಗೆ ಏನಾದರೊಂದು ದಾರಿಯನ್ನು ಹುಡುಕಬೇಕಲ್ಲವೇ? ಎರಡು ಕೋಣಗಳು ಬಡಿದಾಡಿಕೊಂಡಂತೆ ನಾವು ಇಲ್ಲಿ ಹೊಡೆದಾಡಿಕೊಂಡರೆ ಮುಂದೆ ಏನಾಗುತ್ತದೆ? ಇದಕ್ಕೆ ಏನಾದರೊಂದು ಪರಿಹಾರವನ್ನು ಕಂಡುಕೊಂಡು ಈ ಸಮಸ್ಯೆಗೆ ಇತಿಶ್ರೀ ಹಾಡಬೇಕೆಂದು ನಾನು ಎರಡೂ ಪಕ್ಷಗಳ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ. ಹೀಗೆಯೇ ಮುಂದುವರೆದರೆ ಅದು ಎಲ್ಲಿಗೆ ಮುಟ್ಟುತ್ತದೆ? ಸದನದಲ್ಲಿ ಇಷ್ಟು ಪ್ರಶ್ನೆಗಳು ಇರುತ್ತವೆ, ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಲಾಗುತ್ತದೆ. ರಾಜಕೀಯದ ವಿಷಯಗಳಿಗೆ ಈ ಸದನವನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತದೆಂದು ನನಗನ್ನಿಸುತ್ತದೆ. ಈ ಸದನದ ಸಭಾನಾಯಕರು ಸದನದ ಎಲ್ಲಾ ನಡವಳಿಕೆಗಳಿಗೆ ಜವಾಬ್ದಾರರಾಗಿರುತ್ತಾರೆ. ಅವರು ಉತ್ತರಿಸಬೇಕಾಗುತ್ತದೆ. ಎಲ್ಲದಕ್ಕೂ ಅವರ ಮರ್ಜಿಯಲ್ಲಿ ಇವರು, ಇವರ ಮರ್ಜಿಯಲ್ಲಿ ಅವರು ಎಂಬಂತಾದರೆ ಈ ಸದನವು ಎಲ್ಲಿಗೆ ಹೋಗಬೇಕು? ಮೇಲ್ಮನೆ ಎನ್ನುವುದಕ್ಕೆ ತನ್ನದೇ ಆದ ಗೌರವವಿದೆ.

**ಸಭಾಪತಿಯವರು:-** ನಾನು ಈಗ ಸಭಾನಾಯಕರನ್ನು ಮಾತನಾಡಲು ಕರೆದಿರುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಯಾರೋ ನಮ್ಮ ಪಾರಂಪರಿಕ ವೈರಿ ರಾಷ್ಟ್ರದವರು ನಮ್ಮ ಸದನಕ್ಕೆ ಅವಮಾನವಾಗುವಂತಹ ಮಾತುಗಳನ್ನಾಡಿದರೆಂದರೆ ಅವರು ಈ ಸದನದ ಸದಸ್ಯರಲ್ಲವೆಂದು ಬಿಡಲು ಸಾಧ್ಯವೇ? ಸ್ವಾತಂತ್ರ್ಯ ಹೋರಾಟಗಾರರ ಸಮೂಹಕ್ಕೆ ಅವಮಾನವಾದಾಗ, ದೇಶಕ್ಕೆ ಅವಮಾನವಾದಾಗ, ಸಂವಿಧಾನಕ್ಕೆ ಅವಮಾನವಾದಾಗ ಇವರು ನಿಯಮಗಳ ಬಗ್ಗೆ ಚಿಂತನೆ ಮಾಡುತ್ತಾರೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಒಂದು ಚೌಕಟ್ಟನ್ನು ಹಾಕಬೇಕು. ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಮಾತನ್ನು ಒಪ್ಪುತ್ತೇನೆ. ಇದೇ ಸದನದ ಸದಸ್ಯರು ಪ್ರಧಾನ ಮಂತ್ರಿಯವರ ಬಗ್ಗೆ ಮಾತನಾಡಿ ಅವರ ಹೆಂಡತಿಯ ಬಗ್ಗೆ ಯೋಚನೆ ಇಲ್ಲ, ಕಂಡವರ ಹೆಂಡತಿಯ ಬಗ್ಗೆ ಯೋಚನೆ ಇದೆ ಎಂದು ಹೇಳಿದರು. ಕ್ಯಾ ಗಲಾ ಕಾಟ್‌ನಾ ಹೈ? ಎಂದು ಕೇಳಿದರು. ಹಾಗಾದರೆ ಇದು ದೇಶಕ್ಕೆ ಮಾಡಿದ ಅವಮಾನ ಎಂದು ನಾವು ಈ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದಲ್ಲವೇ? ಮಾನ್ಯ ದೊರೆಸ್ವಾಮಿಯವರ ಬಗ್ಗೆ ನಮಗೆ ಅತ್ಯಂತ ಗೌರವವಿದೆ. ಅವರು ಸ್ವಾತಂತ್ರ್ಯ ಹೋರಾಟಗಾರರು ನಿಜ. ಅದರ ಬಗ್ಗೆ ನಮಗೆ ಎರಡನೆ ಪ್ರಶ್ನೆ ಇಲ್ಲ. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾತಂತ್ರ್ಯ ಹೋರಾಟಗಾರರು ಇವತ್ತು ಹೇಳುತ್ತಿರುವ ಎಲ್ಲಾ ಹೇಳಿಕೆಗಳು ಸ್ವಾತಂತ್ರ್ಯ ಹೋರಾಟಗಾರರಾಗಿ ಹೇಳುತ್ತಿದ್ದಾರೆಂದು ಭಾವಿಸಬೇಕೆ? ಅವರ ಚಟುವಟಿಕೆಗಳನ್ನು ಸ್ವಾತಂತ್ರ್ಯ ಹೋರಾಟಗಾರರಾಗಿಯೇ ಮಾಡುತ್ತಿದ್ದಾರೆ ಎಂದು ಹೇಳಬೇಕೆ? ಹಾಗಾದರೆ ಕನ್ನಯ್ಯನ ಜೊತೆಯಲ್ಲಿ ನಿಂತುಕೊಂಡು 'ತುಕ್ಡೇ ತುಕ್ಡೇ ಗ್ಯಾಂಗ್' ಜೊತೆಗಿದ್ದಾಗ ಸ್ವಾತಂತ್ರ್ಯ ಹೋರಾಟಗಾರರು...

**ಸಭಾಪತಿಯವರು:–** ಸದನವನ್ನು ಸಂಜೆ 04.00 ಗಂಟೆಯವರೆಗೆ ಮುಂದೂಡಲಾಗಿದೆ.

(116) 02.03.2020 4.00 KG KS

**(ಮಧ್ಯಾಹ್ನ 01 ಗಂಟೆ 22 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 4 ಗಂಟೆ 9 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಸದಸ್ಯರು ಬಾವಿಯಲ್ಲಿ ಧರಣಿ ನಿರತರಾಗಿ "ರದ್ದುಗೊಳಿಸಿ, ರದ್ದುಗೊಳಿಸಿ, ಶಾಸಕತ್ವ ರದ್ದುಗೊಳಿಸಿ", "ದೇಶದ್ರೋಹಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ರವರಿಗೆ ಧಿಕ್ಕಾರ, ಧಿಕ್ಕಾರ" ಎಂದು ಘೋಷಣೆಗಳನ್ನು ಕೂಗಿದರು)**

(ಗೊಂದಲ)

**ಸಭಾಪತಿಯವರು:–** ಸದಸ್ಯರೇ, ಒಂದು ನಿಮಿಷ ತಾವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

(ಮುಂದು.,)

(117)02–03–2020(4–10)ಎಂವಿ–ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅಲ್ಲಿ ಚರ್ಚೆ ನಡೆಯುತ್ತಿದೆ. ಇಲ್ಲಿ ಎಷ್ಟು ಹೊತ್ತಾದರೂ ಸಹ ಚರ್ಚೆ ಮಾಡೋಣ. ನಿಯಮದ ಪ್ರಕಾರ ನೋಟೀಸ್ ನೀಡಬೇಕು. ಆದರೆ, ಯಾವುದೇ ನೋಟೀಸ್ ಇಲ್ಲದೆ, ರದ್ದುಗೊಳಿಸಿ, ಕ್ಷಮೆ ಕೇಳಿ ಎಂದು ಹೇಳಿದರೆ. ಯಾವುದನ್ನು ಯಾರು ರದ್ದುಗೊಳಿಸುವುದು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ದಯಮಾಡಿ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳುವುದು.

**(ಈ ಹಂತದಲ್ಲಿ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆ.ಡಿ(ಎಸ್)ನ ಮಾನ್ಯ ಸದಸ್ಯರುಗಳು ಮಾನ್ಯ ಶಾಸಕರಾದ ಬಸನಗೌಡ ಪಾಟೀಲ್ (ಯತ್ನಾಳ್) ರವರು ಸ್ವಾತಂತ್ರ್ಯ ಹೋರಾಟಗಾರರನ್ನು ಅಪಮಾನಿಸಿದ್ದಾರೆಂದು ಅವರ ವಿರುದ್ಧ ಧಿಕ್ಕಾರ ಕೂಗಿದರು)**

**ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಾಯಂಕಾಲ 4 ಗಂಟೆ 13 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 3ನೇ ಮಾರ್ಚ್ ಮಾಹೆ 2020ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~